**ಉಪಾಧ್ಯಕ್ಷರು** : ಮಾನ್ಯ ವಿರೋಧ ಪಕ್ಷದ ನಾಯಕರು ಏನಾದರೂ ಮಾತನಾಡುತ್ತೀರಾ?

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು ಇದಕ್ಕೆ ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದಾರೆ. ಇದರಿಂದ ನಮಗೇನೂ ತೊಂದರೆ ಇಲ್ಲ. ಆದರೆ, ಇದು ಗೃಹ ಇಲಾಖೆಗೆ ಸಂಬಂಧಪಟ್ಟಂಥ ವಿಷಯವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಂಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತೆ ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಈ ರಾಜ್ಯದ ಮುಖ್ಯಮಂತ್ರಿಗಳು ನೇರವಾಗಿ ಉತ್ತರ ಕೊಡಬೇಕಾಗುತ್ತದೆ. ಅವರು ಇಲ್ಲಿಗೆ ಬಂದು ಉತ್ತರ ಕೊಟ್ಟರೆ ನಾವು ಕೇಳುತ್ತೇವೆ. ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೇಳುವುದಕ್ಕೆ ಇವತ್ತು ನಾವು ತಯಾರಿಲ್ಲ. ಆದ್ದರಿಂದ ನಾವು ಪ್ರತಿಭಟನೆ ಮಾಡುವುದಲ್ಲದೆ ಇವತ್ತು ಸದನ ನಡೆಯುವಕ್ಕೆ ಬಿಡುವುದಿಲ್ಲ. ನಾವೆಲ್ಲರೂ ಸದನದ ಬಾವಿಯೊಳಗೆ ಹೋಗುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯೊಳಗೆ ಬಂದರು)

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕೊಡತಕ್ಕಂಥ ಉತ್ತರವನ್ನು ಕೇಳುವಂಥ ಸಹನೆ ಕೂಡ ಇವರಲ್ಲಿ ಇಲ್ಲ.....ಉತ್ತರ ಕೊಡುತ್ತೇವೆಂದರೂ ಕೂಡ ಇವರಿಗೆ ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಉಪಾಧ್ಯಕ್ಷರೆ, ಇಷ್ಟು ವರ್ಷಗಳ ಕಾಲ ಆಡಳಿತ ನಡೆಸಿದಂಥ ನಮ್ಮ ಸ್ನೇಹಿತರು, ಮುಖ್ಯಮಂತ್ರಿಗಳು ಇಲ್ಲದೆ ಇದ್ದಂಥ ಸಂದರ್ಭದಲ್ಲಿ ಇದೇ ಮನೆಯಲ್ಲಿ ಬೇರೆಯವರು ಅವರ ಪರವಾಗಿ ಉತ್ತರ ಕೊಟ್ಟಿಲ್ಲವೆ?

**(ಗೊಂದಲ)**

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಬಂದು ಇದರ ಬಗ್ಗೆ ಉತ್ತರ ಕೊಡಲಿ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇದೇನೂ ಹೊಸದಾಗಿ ನಾವು ಮಾಡುತ್ತಿಲ್ಲ. ಇಲ್ಲಸಲ್ಲದ ಕುಂಟು ನೆಪವೊಡ್ಡಿಕೊಂಡು ಈ ಸದನದ ಕಾರ್ಯಕಲಾಪಗಳನ್ನು ತಡೆಯುವುದರ ಬಗ್ಗೆ ಇವರಿಗೆ ಆಸಕ್ತಿ ಇದೆಯೇ ಹೊರತು, ಉತ್ತರ ಪಡೆದು ಆ